
ಡಾ. ಸಿದ್ದಯ್ಯ ಪುರಾಣಿಕರು ನಾಡಿನ ಪ್ರಮುಖ ಲೇಖಕರಲ್ಲಿ ಒಬ್ಬರು. ಅವರು ತಮ್ಮ ೫೫ ವರ್ಷಗಳ ಸಾಹಿತ್ಯ ಸೇವೆ ಮಾಡುತ್ತ ಕಾವ್ಯ, ಗದ್ಯ, ನಾಟಕ, ಮಕ್ಕಳ ಸಾಹಿತ್ಯ ಮತ್ತು ಕಾದಂಬರಿ ಕೃತಿಗಳನ್ನು ಬರೆದಿರುವರು. ಅವರು ಒಬ್ಬ ಉನ್ನತ ಐ.ಎ.ಎಸ್ ಅಧಿಕಾರಿ ಆಗಿ, ಕನ್ನಡ ನಾಡಿಗೆ ಮತ್ತು ಜನತೆಗೆ ಅಪೂರ್ವ ಸೇವೆಮಾಡಿ ಎಲ್ಲಾರ ಪ್ರೀತಿ ಗಳಿಸಿದ್ದಾರೆ. ಅವರು ೫–೯–೧೯೯೪ ರಲ್ಲಿ ಲಿಂಗೈಕ್ಯರಾದರು.


ಅವರ ೯೦ನೆಯ ಹುಟ್ಟು ಹಬ್ಬದ ಸಂದರ್ಭದಲ್ಲಿ (೨೦೦೮) ನಾವು ಅವರ ಎಲ್ಲಾ ಪುಸ್ತಕಗಳನ್ನು, ನಮ್ಮ ಶ್ರೀಗಿರಿ ಪ್ರಕಾಶನದಿಂದಲೇ ಮುದ್ರಿಸಲು ತೀರ್ಮಾನಿಸಿದೆವು. ಮುಂದಿನ ಎಂಟು ವರ್ಷಗಳಲ್ಲಿ ಡಾ. ಸಿದ್ದಯ್ಯ ಪುರಾಣಿಕರ ಸಮಗ್ರ ಕಾವ್ಯ, ಸಮಗ್ರ ವಚನ, ಸಮಗ್ರ ನಾಟಕ, ಸಮಗ್ರ ಮಕ್ಕಳ ಸಾಹಿತ್ಯ, ಸಮಗ್ರ ಬಾಲಸಾಹಿತ್ಯ ಎಲ್ಲಾವನ್ನು ಪ್ರಕಟಿಸಿದ್ದೇವೆ.

ನಮ್ಮ ಎಲ್ಲಾ ಪ್ರಕಟಣೆಗಳಿಗೆ ಡಾ. ವಿದ್ಯಾಶಂಕರ ಅವರು ಮಾರ್ಗದರ್ಶನ ಮಾಡಿದ್ದಾರೆ ಮತ್ತು ಸ್ನೇಹಾ ಪ್ರಿಂಟರ್ಸ ನವರು ಇವುಗಳನ್ನು ಮುದ್ರಿಸಿದ್ದಾರೆ. ಇವರಿಬ್ಬರಿಗೂ ನಮ್ಮ ಕೃತಜ್ಞತೆಗಳು. ಈ ಎಲ್ಲಾ ಕಾರ್ಯಗಳಿಗೆ ನನ್ನಜೊತೆಗೆ ನನ್ನ ಪತ್ನಿ ಶ್ರೀಮತಿ ಲತಾ ಪುರಾಣಿಕ ಅವರು ಸಮನಾಗಿ ದುಡಿದಿರುವರು.




೨೦೧೪ರಲ್ಲಿ ನಾವು ಕನ್ನಡ ಸಂಸ್ಕೃತಿ ಇಲಾಖೆಯನ್ನು ಸಂಪರ್ಕಿಸಿ ೨೦೧೮ ರಲ್ಲಿ ಬರುವ ಸಿದ್ದಯ್ಯ ಪುರಾಣಿಕರ ಜನ್ಮ ಶತಮಾನೋತ್ಸವವನ್ನು ಆಚರಿಸ ಬೇಕೆಂದು ವಿನಂತಿ ಮಾಡಿಕೊಂಡೆವು. ಅಲ್ಲದೆ ಅವರ ಗದ್ಯ ಕೃತಿಗಳನ್ನು ಸಮಗ್ರರೂಪದಲ್ಲಿ ಮುದ್ರಿಸ ಬೇಕೆಂದು ಮತ್ತು ಸಮಗ್ರ ಕಾವ್ಯ, ವಚನ ಮತ್ತು ನಾಟಕ ಮರು ಮುದ್ರಣ ಮಾಡಲು ಇಲಾಖೆಯನ್ನು ಒಪ್ಪಿಸಿದೆವು.


೨೦೧೮ ರಲ್ಲಿ ಡಾ. ಸಿದ್ದಯ್ಯ ಪುರಾಣಿಕರ ಜನ್ಮ ಶತಮಾನೋತ್ಸವವನ್ನು ಇಲಾಖೆ ಆಚರಿಸಿತು. ಮುಂದೆ ಅವರು ಪುರಾಣಿಕರ ಸಮಗ್ರ ಸಾಹಿತ್ಯವನ್ನು ಆರು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸಿದರು. (ಈ ಆರು ಸಮಗ್ರ ಕೃತಿಗಳ ಭಾವಚಿತ್ರ )





ಸಮಗ್ರ ಗದ್ಯ 1





ಸಮಗ್ರ ಗದ್ಯ 2





ಸಮಗ್ರ ಗದ್ಯ 3




ಸಮಗ್ರ ಕಾವ್ಯ





ಸಮಗ್ರ ವಚನಗಳು




ಸಮಗ್ರ ನಾಟಕಗಳು

೨೦೧೮ರಲ್ಲಿ ನಾವು ಅವರ ಆತ್ಮಕಥೆಯನ್ನು ನಮ್ಮ ಶ್ರೀಗಿರಿ ಪ್ರಕಾಶನದಿಂದ ಹೊರತಂದೆವು. ಈ ಪುಸ್ತಕವು ೪೦ ವರ್ಷಗಳ ನಂತರ ಮರು ಮುದ್ರಣವಾಯಿತು. ಇದರ ಪ್ರತಿಗಳು ಲಭ್ಯವಿಲ್ಲದೆ ಇದ್ದಿದ್ದರಿಂದ ಮತ್ತು ಇದು ಅವರ ಪರಿಚಯವನ್ನು ಮಾಡಿಕೊಡುವ ಉದ್ದೇಶದಿಂದ ನಾವು ಇದರಲ್ಲಿ ಅವರ ಆಯ್ದ ಕವನಗಳು, ವಚನಗಳು ಮತ್ತು ಅವರ ಜೀವನದ ಹಲವು ಘಟನೆಗಳನ್ನು ಬಿಂಬಿಸುವ ಚಿತ್ರಗಳನ್ನೂ ಇತರ ಅನೇಕ ಮಾಹಿತಿಗಳನ್ನು ಸೇರಿಸಿದೆವು.




ಪುರಾಣಿಕರ ಎಲ್ಲಾ ಕೃತಿಗಳು ಸಮಗ್ರರೂಪದಲ್ಲಿ ಮೊದಲಬಾರಿಗೆ ಲಭ್ಯವಿರುವದರಿಂದ ನಾವು ಅವರ ಕಾವ್ಯನಾಮವಾದ "ಕಾವ್ಯಾನಂದ" ದ ಅಡಿಯಲ್ಲಿ ಅವರ ಎಲ್ಲಾ ಪುಸ್ತಕಗಳನ್ನು ಒಳಗೊಂಡ ಜಾಲತಾಣವನ್ನು ಅಭಿವೃದ್ಧಿ ಪಡಿಸುವ ನಿರ್ಧಾರ ತೆಗೆದುಕೊಂಡೆವು.

ಮುಂದಿನ ಐದು ವರ್ಷಗಳಲ್ಲಿ ನಾವು ಬಹಳ ಶ್ರದ್ಧೆಯಿಂದ ಪರಿಶ್ರಮ ಮಾಡಿ ಅವರ ಚಿತ್ರಗಳು, ಅವರ ಬಗ್ಗೆ ರಚಿಸಲಾದ ಪುಸ್ತಕಗಳು, ವರ್ಷಗಳಿಂದ ಪ್ರಕಟವಾಗಿರುವ ಸುದ್ದಿಪತ್ರಿಕೆಗಳ ತುಣುಕುಗಳು, ಆಡಿಯೋ/ವೀಡಿಯೋ ಕ್ಲಿಪ್‌ಗಳು, ಅವರ ಭಾಷಣಗಳು/ಲೇಖನಗಳು, ಹಾಡುಗಳು ಮತ್ತು ಇತರ ಅನೇಕ ವಿಷಯಗಳನ್ನು ಸಂಗ್ರಹಿಸಿ, ಅಗತ್ಯವಿರುವ ವಸ್ತುಗಳನ್ನು ನಮ್ಮ ಮನೆಯಲ್ಲಿಯೇ ಸ್ಕ್ಯಾನ್ ಮಾಡಿದೆವು.

ಡಾ. ಸಿದ್ದಯ್ಯ ಪುರಾಣಿಕರ ಕೆಲವು ಕೃತಿಗಳನ್ನು ಇಂಗ್ಲೀಷ್ ಮತ್ತು ಹಿಂದಿಯಲ್ಲಿ ಅನುವಾದ ಮಾಡುವ ವ್ಯವಸ್ಥೆ ಮಾಡಲಾಯಿತು.

ಎಲ್ಲಾ ಮಾಹಿತಿಗಳನ್ನು ಒದಗಿಸಿಕೊಂಡು, ಇತರ ಏರ್ಪಾಡುಗಳನ್ನು ಮಾಡಿಕೊಂಡ ಮೇಲೆ, ನಾವು ಖ್ಯಾತ ಸಂಸ್ಥೆಯಾದ ಕನ್ನಡ ಗಣಕ ಪರಿಷತ್ತನ್ನು ಸಂಪರ್ಕಿಸಿ, ನಮ್ಮ ವಿನ್ಯಾಸದ ಪ್ರಕಾರ ಕನ್ನಡ, ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳ ಮಾಹಿತಿಗಳನ್ನೂ ಒಳಗೊಂಡಂತೆ ಡಾ. ಸಿದ್ದಯ್ಯ ಪುರಾಣಿಕರ ಕುರಿತಾದ ಜಾಲತಾಣವನ್ನು ಅಭಿವೃದ್ಧಿಪಡಿಸಲು ವಿನಂತಿಸಿದೆವು.

ನಮ್ಮ ಜಾಲತಾಣವನ್ನು ಅತ್ಯಂತ ಕಾಳಜಿ ಮತ್ತು ಪರಿಶ್ರಮದಿಂದ ಅಭಿವೃದ್ಧಿಪಡಿಸಿರುವುದಕ್ಕೆ ಗಣಕ ಪರಿಷತ್ತಿನ ಶ್ರೀ ನರಸಿಂಹಮೂರ್ತಿ ಮತ್ತು ಜಾಲತಾಣವನ್ನು ವಿನ್ಯಾಸ ಮಾಡಿದ ಶ್ರೀ ಮಹೇಶ್ ಅವರಿಗೆ ನಾವು ತುಂಬ ಕೃತಜ್ಞರಾಗಿದ್ದೇವೆ.

ಅಂತಿಮವಾಗಿ, ೧೬ ವರ್ಷಗಳ ಪರಿಶ್ರಮದ ನಂತರ, ಜುಲೈ ೨೦೨೪ ರಲ್ಲಿ ಸೈಟ್ ಸಿದ್ಧವಾಯಿತು, ಮತ್ತು ಅದನ್ನು ಕುಟುಂಬ ಸದಸ್ಯರು ಮತ್ತು ಸಮೀಪದ ಸಂಪರ್ಕಗಳೊಂದಿಗೆ ಪ್ರಾಯೋಗಿಕ ಬಿಡುಗಡೆ ಮಾಡಲಾಯಿತು. ಅವರಿಂದ ಸಲಹೆ,


ಪ್ರತಿಕ್ರಿಯೆಗಳನ್ನು ಪಡೆದು ತಾಣದಲ್ಲಿ ಸುಧಾರಣೆಗಳನ್ನು ಮಾಡಲಾಯಿತು. ಪ್ರತಿಕ್ರಿಯೆ ಮತ್ತು ನಮ್ಮ ಸ್ವಂತ ಮೌಲ್ಯಮಾಪನ ಆಧರಿಸಿ, ನಾವು ಕೆಲವು ಹೆಚ್ಚುವರಿ ವಿಷಯಗಳನ್ನು ಸೇರಿಸಿ ಮತ್ತಷ್ಟು ಸುಧಾರಣೆಗಳನ್ನು ಮಾಡಿದ್ದೇವೆ.

ಸಿದ್ದಯ್ಯಪುರಾಣಿಕರ ಜಾಲತಾಣ www.kavyananda.com ಹಾಗೂ (www.kavyananda.org) ಎಂಬ ವಿಳಾಸಗಳಲ್ಲಿ ಈಗ ಸಾರ್ವಜನಿಕರಿಗೆ ಲಭ್ಯವಿದೆ. ಅದರ ಮುಖ್ಯ ವಸ್ತು ವಿಷಯವೆಂದರೆ ಸಿದ್ದಯ್ಯ ಪುರಾಣಿಕರ ಕನ್ನಡದ ಎಲ್ಲಾ ಕೃತಿಗಳು ಹಾಗು ಇಂಗ್ಲಿಷ್ ಮತ್ತು ಹಿಂದಿಗೆ ಅನುವಾದಿತವಾಗಿರುವ ಅವರ ಕೆಲವು ಕೃತಿಗಳು.

ಜಾಲತಾಣವನ್ನು ಸಾಮಾನ್ಯ ಓದುಗರಿಗೆ, ಸಾಹಿತ್ಯಾಸಕ್ತರು ಮತ್ತು ಸಂಶೋಧಕರುಗಳಿಗೆ ಪ್ರಯೋಜನಕಾರಿಯಾಗುವಂತೆ ವಿನ್ಯಾಸ ಮಾಡಿ ಅದರಲ್ಲಿ ಎಲ್ಲಾರಿಗೂ ಅಗತ್ಯವಾದ ವಿವರಗಳನ್ನು ಇರಿಸಲಾಗಿದೆ.

ಅಲ್ಲಿ ಅವರ ಎಲ್ಲಾ ಕೃತಿಗಳೂ ಲಭ್ಯವಿವೆ. ಜೊತೆಗೆ ಇನ್ನೂ ಅನೇಕ ಉಪಯುಕ್ತ ಮಾಹಿತಿಗಳಿವೆ. ಅಗತ್ಯವಿದ್ದಲ್ಲಿ ಬೇಕಾದ ಕೃತಿ ಮತ್ತು ಇತರೆ ವಿಷಯ ತಾವು ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಜಾಲತಾಣವನ್ನು ಮೊಬೈಲ್ಅಥವಾ ಕಂಪ್ಯೂಟರಿನ ಮೂಲಕ ಪ್ರವೇಶಿಸ ಬಹುದಾಗಿದೆ.

ಜಾಲತಾಣದ ಕಂಪ್ಯೂಟರು ಮತ್ತು ಮೊಬೈಲ್ ಆವೃತ್ತಿಗಳಲ್ಲಿ ಒಂದು ಮುಖ್ಯ ವ್ಯತ್ಯಾಸವಿದೆ. ಕಂಪ್ಯೂಟರಿನಲ್ಲಿ ನೇರವಾಗಿ ಪರಿವಿಡಿ ಪಟ್ಟಿಯ ಮೂಲಕ ನೀವು ಯಾವ ಪುಟಕ್ಕಾದರೂ ಪ್ರವೇಶಿಸಬಹುದು. ಆದರೆ ಮೊಬೈಲ್ ಮೂಲಕ ತಾಣವನ್ನು ತೆರೆದರೆ ಆಗ ಎಡಗಡೆ ಇರುವ ಮೂರು ಅಡ್ಡಗೆರೆಗಳನ್ನು ಒತ್ತಿದರೆ ನಿಮಗೆ ಪರಿವಿಡಿ ಪಟ್ಟಿದೊರಕುತ್ತದೆ. ಅದರ ಮೂಲಕ ನೀವು ಬೇಕಾದ ಪುಟಕ್ಕೆ ಪ್ರವೇಶಿಸಬಹುದು.




ಮುಖ್ಯ ಪರಿವಿಡಿ ಪಟ್ಟಿಯ ಮೇಲಣ ಸ್ಥಳದಲ್ಲಿ ಇಂಗ್ಲಿಷ್ ಮತ್ತು ಹಿಂದಿ ಪರಿವಿಡಿಗಳಿವೆ. ನೀವು ಯಾವ ಭಾಷೆಯ ಮೇಲೆ ಕ್ಲಿಕ್ ಮಾಡುತ್ತೀರೋ ಹಾಗೆ ತಾಣ ಆ ಭಾಷೆಯಲ್ಲಿ ಕಾಣಿಸಿಕೊಳ್ಳುತ್ತದೆ.







ಮುಖ್ಯ ಪರಿವಿಡಿ ಪಟ್ಟಿಯ ಮೇಲಣ ಸ್ಥಳದಲ್ಲಿ ಇಂಗ್ಲಿಷ್ ಮತ್ತು ಹಿಂದಿ ಪರಿವಿಡಿಗಳಿವೆ. ನೀವು ಯಾವ ಭಾಷೆಯ ಮೇಲೆ ಕ್ಲಿಕ್ ಮಾಡುತ್ತೀರೋ ಹಾಗೆ ತಾಣ ಆ ಭಾಷೆಯಲ್ಲಿ ಕಾಣಿಸಿಕೊಳ್ಳುತ್ತದೆ.









ಕನ್ನಡದ ಜಾಲತಾಣ ತೆಗೆದಾಗ ಪುರಾಣಿಕರ ಭಾವಚಿತ್ರದ ಕೆಳಗಡೆ ಮೂರು ಟ್ಯಾಬ ಇದೆ.




ಮೊದಲನೆಯ ಟ್ಯಾಬ ಜಾಲತಾಣ ಪರಿಚಯ, ಅದನ್ನು ಕ್ಲಿಕ್ ಮಾಡಿದರೆ ಜಾಲತಾಣವನ್ನು ಹೇಗೆ ನೋಡ ಬಹುದೆಂದು ವಿವರಿಸಿದೆ. ಅದರ ಪಕ್ಕ ಟ್ಯಾಬ ಪರಿಚಯ ವಿಡಿಯೋ ಇದೆ, ಅದನ್ನು ಕ್ಲಿಕ್ ಮಾಡಿದರೆ ನೀವು ಪುರಾಣಿಕರ ಜೀವನದ ಸ್ಲೈಡ್ ವಿಡಿಯೋ ನೋಡ ಬಹುದು. ಅದರ ಪಕ್ಕದ ಟ್ಯಾಬ ಪರಿಚಯವಿದೆ ಅದನ್ನು ಕ್ಲಿಕ್ ಮಾಡಿದರೆ ಸಂಕ್ಷಿಪ್ತವಾಗಿ ಪುರಾಣಿಕ ಅವರ ಜೀವನ ಮತ್ತು ಸಾಧನೆ ಓದ ಬಹುದು. ಇದರ ಕೆಳಗಡೆ ಕಿರು ಪರಿಚಯದ ಟ್ಯಾಬ ಇದೆ, ಅದನ್ನು ಕ್ಲಿಕ್ ಮಾಡಿದರೆ ಜಾಲತಾಣ ಸಂಪಾದಕರ ಪರಿಚಯವಿದೆ.





ಕನ್ನಡದ ಪರಿವಿಡಿ ಪಟ್ಟಿಯಲ್ಲಿರುವ ಮೊದಲ ಶೀರ್ಷಿಕೆ ಜೀವನ ಸಾಧನೆ ಎಂದಿದೆ. ಅದರ ಮೇಲೆ ಕ್ಲಿಕ್ ಮಾಡಿದರೆ ಅಲ್ಲಿ ಎಂಟು ಉಪಶೀರ್ಷಿಕೆಗಳಿವೆ. ಅವೆಲ್ಲವೂ ಸ್ವತಃ ತಾವೇ ಒಳಗಿರುವ ಮಾಹಿತಿಯನ್ನು ವಿವರಿಸುತ್ತವೆ.




ನೀವು ಅಗತ್ಯವಾದ ಶೀರ್ಷಿಕೆಯ ಮೇಲೆ ಕ್ಲಿಕ್ ಮಾಡಿದರೆ ಆಯಾ ಮಾಹಿತಿ ಸಂಪುಟಗಳು ತೆರೆದುಕೊಳ್ಳುತ್ತವೆ.


ಮುಂದಿರುವ ‘ಕೃತಿಗಳು’ ಎಂಬ ಶೀರ್ಷಿಕೆಯ ಮೇಲೆ ಕ್ಲಿಕ್ ಮಾಡಿದರೆ ನೀವು ಅವರ ಎಲ್ಲಾ ಕೃತಿಗಳನ್ನು ನೋಡಬಹುದು.




ಎಲ್ಲಾ ಪುಸ್ತಕಗಳ ಶೀರ್ಷಿಕೆಗಳು ಅಲ್ಲಿ ಕಾಣಬರುತ್ತವೆ. ನಿಮಗೆ ಓದಬೇಕೆನಿಸಿದ ಶೀರ್ಷಿಕೆಯ ಮೇಲೆ ಕ್ಲಿಕ್ ಮಾಡಿದರೆ ಆ ಪುಸ್ತಕ ಇಡಿಯಾಗಿ ತೆರೆದುಕೊಳ್ಳುತ್ತದೆ.

ಮುಂದಿನ ಶೀರ್ಷಿಕೆ ಗಾಯನ ನೀವು ಅದರ ಮೇಲೆ ಕ್ಲಿಕ್ ಮಾಡಿದರೆ ಅವರ ಎಲ್ಲಾ ಕವನಗಳ ಪಟ್ಟಿ ಕಾಣಿಸಿಕೊಳ್ಳುತ್ತದೆ.


ನೀವು ಕೇಳಬಯಸಿದ ಹಾಡಿನ ಶೀರ್ಷಿಕೆಯ ಮೇಲೆ ಕ್ಲಿಕ್ ಮಾಡಿದರೆ ಆ ಹಾಡನ್ನು ಕೇಳಬಹುದಾಗಿದೆ.






ಮುಂದಿನ ಶೀರ್ಷಿಕೆ ಚಿತ್ರ ಸಂಪುಟ. ಅದರ ಮೇಲೆ ಕ್ಲಿಕ್ ಮಾಡಿದರೆ ವಿವಿಧ ಸಂದರ್ಭಗಳಲ್ಲಿನ ಸಿದ್ದಯ್ಯಪುರಾಣಿಕರ ಚಿತ್ರಗಳನ್ನು ವೀಕ್ಷಿಸಬಹುದು. ಜೊತೆಗೆ ಆಯ್ದ ಸಂಪುಟಗಳ ಮೇಲೆ ಕ್ಲಿಕ್ ಮಾಡುವುದರ ಮೂಲಕ ಬೇಕಾದ ಸಂಪುಟದಲ್ಲಿರುವ ಚಿತ್ರಗಳನ್ನು ನೋಡಬಹುದು.




ಅನಂತರ ಧ್ವನಿ/ ವೀಡಿಯೋ ಶೀರ್ಷಿಕೆ ಇದೆ. ಅದರ ಮೇಲೆ ಕ್ಲಿಕ್ ಮಾಡಿದರೆ ಅನೇಕ ಸಂಬಂಧಿತ ಫೋಲ್ಡರ್‌ಗಳು ಕಾಣಬರುತ್ತವೆ. ಪುರಾಣಿಕರ ಉಪನ್ಯಾಸಗಳು ಮತ್ತು ಹಲವು ವೀಡಿಯೋಗಳು ನಿಮಗೆ ನೋಡಲು, ಕೇಳಲು ಲಭ್ಯವಾಗುತ್ತವೆ.











ಮುಂದಿನ ಶೀರ್ಷಿಕೆಯ ಮೇಲೆ ಕ್ಲಿಕ್ ಮಾಡಿದರೆ ರಾಜ್ಯ ಕೇಂದ್ರ ಗ್ರಂಥಾಲಯದಲ್ಲಿರುವ ಪುರಾಣಿಕರದೆ ವೈಯಕ್ತಿಕ ಪುಸ್ತಕ ಸಂಗ್ರಹದಲ್ಲಿ ಲಭ್ಯವಿರುವ ಪುಸ್ತಕಗಳ ವಿವರಗಳು ದೊರೆಯುತ್ತವೆ.

ಇನ್ನೊಂದು ಫೋಲ್ಡರನಲ್ಲಿ ನಿಮಗೆ ವಿವಿಧ ಗ್ರಂಥಾಲಯಗಳಲ್ಲಿ ಇರುವ ಪುರಾಣಿಕರ ಕೃತಿಗಳ ಪಟ್ಟಿ ಕಾಣಬಹುದು.




ಮುಂದಿನ ಶೀರ್ಷಿಕೆಯಲ್ಲಿ ಮರಾಠಿ, ಉರ್ದು, ತೆಲುಗು ಮತ್ತು ನೇಪಾಳಿ ಭಾಷೆಗಳಿಗೆ ಅನುವಾದವಾಗಿರುವ ಪುರಾಣಿಕರ ಕೃತಿಗಳು ಲಭ್ಯವಿವೆ.




ಕೊನೆಯ ಶೀರ್ಷಿಕೆಯಲ್ಲಿ ಸಂಪರ್ಕ ವಿವರಗಳಿವೆ.